**ಹೆಚ್ಚುವರಿ ಸಿವಿಲ್ ಮತ್ತು ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ 2487/2024**

**ಸಾಕ್ಷಿಃ ಸಿಡಬ್ಲ್ಯೂಃ 1, ಪಿ.ಡಬ್ಲ್ಯೂಃ 1**

| | | |
|---|---|---|
| ಸಾಕ್ಷಿದಾರರ ಹೆಸರು | : | ಸ್ವಪ್ನಾ ಪ್ರಣಾವ್ ಭಟ್ |
| ತಂದೆಯ ಹೆಸರು | : | ಪ್ರಣಾವ್ ಭಟ್ |
| ವಯಸ್ಸು | : | 30 ವರ್ಷ |
| ಉದ್ಯೋಗ | : | ಗೃಹಿಣಿ |
| ವಾಸ್ತವ್ಯ | : | ಹೆಗ್ಗಾರ, ಹೊನ್ನಾವರ |
| ದಿನಾಂಕ | : | 22.06.2026 |

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ದಿಃ 07.01.2021 ರಂದು ಶ್ರೀ ಲಕ್ಷ್ಮೀ ವೆಂಕಟೇಶ ಸಭಾಭವನದಲ್ಲಿ ನನ್ನ ಹಾಗೂ 1ನೇ ಆರೋಪಿಯ ವಿವಾಹವಾಗಿರುತ್ತದೆ. ನನ್ನ ಹಾಗೂ 1ನೇ ಆರೋಪಿಯ ವಿವಾಹಕ್ಕೂ ಪೂರ್ವದಲ್ಲಿ ನನ್ನ ಪತಿಯ ಮನೆಯವರು ನಮ್ಮಲ್ಲಿ 25 ಪವನ್ ಚಿನ್ನಾಭರಣ ಹಾಗೂ 10 ಲಕ್ಷದ ನಗದಿನ ಬೇಡಿಕೆಯನ್ನು ಒಡ್ಡಿರುತ್ತಾರೆ. ಸದ್ರಿ ಬೇಡಿಕೆಯನ್ನು ನನ್ನ ತಂದೆಯವರು ನಿರಾಕರಿಸಿರುತ್ತಾರೆ. ಆದರೂ ನನ್ನ ಪತಿಯ ಮನೆಯವರು ಬಲವಂತ ಪಡಿಸಿರುತ್ತಾರೆಂದು ನನ್ನ ತಂದೆಯವರು 4 ಲಕ್ಷ ನಗದನ್ನು ನನ್ನ ಹಾಗೂ 1ನೇ ಆರೋಪಿಯ ವಿವಾಹದ ಪೂರ್ವದಲ್ಲಿ ಹಾಗೂ ವಿವಾಹದ ಸಂದರ್ಭದಲ್ಲಿ 7 ಪವನ್ ಚಿನ್ನಾಭರಣವನ್ನು ನನ್ನ ವಿವಾಹದಲ್ಲಿ ಚಿನ್ನಾಭರಣದ ರೂಪದಲ್ಲಿ ಒಡವೆಗಳನ್ನು ಹಾಕಿರುತ್ತಾರೆ. ಹಾಗೂ ನನ್ನ ಪತಿಯ ಮನೆಯವರ ಬೇಡಿಕೆಯ ಪ್ರಕಾರ ಚಿನ್ನದ ಉಂಗುರ ಹಾಗೂ ಬೆಳ್ಳಿಯ ಸಂದೂಕವನ್ನು ನನ್ನ ತವರು ಮನೆಯವರು 1ನೇ ಆರೋಪಿಗೆ ನೀಡಿರುತ್ತಾರೆ. ಹಾಗೂ ನನ್ನ ತವರು ಮನೆಯವರು ನನ್ನ ಹಾಗೂ 1ನೇ ಆರೋಪಿಯ ವಿವಾಹದ ಬಾಬ್ತು ರೂ. 3 ಲಕ್ಷ ವನ್ನು ನಮ್ಮ ವಿವಾಹಕ್ಕಾಗಿ ಖರ್ಚು ಮಾಡಿರುತ್ತಾರೆ.

ತದನಂತರ ನನ್ನ ಹಾಗೂ 1ನೇ ಆರೋಪಿಯ ವಿವಾಹವಾದ ನಂತರ ನನು ನನ್ನ ಪತಿಯಾದ 1ನೇ ಆರೋಪಿಯೊಂದಿಗೆ ಶಿರಾಲಿಯ ಕೊಂಕಣಕೇರಿ ಎಂಬಲ್ಲಿ ಜೊತೆಯಾಗಿ ವಾಸಿಸಲು ಪ್ರಾರಂಭಸಿರುತ್ತೇವೆ. ಸದ್ರಿ ಮನೆಯಲ್ಲಿ ನಾನು ಹಾಗೂ ನನ್ನ ಪತಿಯಾದ 1ನೇ ಆರೋಪಿಯು ಮೊದಲನೇ ಅಂತಸ್ತಿನಲ್ಲಿ , 2 ಹಾಗೂ 3ನೇ ಆರೋಪಿಯು ನನ್ನ ಮೈದನನೊಂದಿಗೆ ಕೆಳ ಅಂತಸ್ತಿನಲ್ಲಿ  ವಾಸವಾಗಿರುತ್ತಾರೆ. ನನ್ನ ವಿವಾಹವಾದ ಸ್ವಲ್ಪ ದಿನಗಳ ನಂತರ 2 ಹಾಗೂ 3ನೇ ಆರೋಪಿಯು ನನ್ನಲ್ಲಿ ಸರಿಯಾಗಿ ಮಾತನಾಡುತ್ತಿರಲಿಲ್ಲ. ನಾನು ಯಾರ ಜೊತೆಯೂ ಮಾಡನಾಡಬಾರದೆಂದು ನನ್ನ ಕೊಠಡಿಯ ಖಿಡಕಿಯನ್ನು ಹೊರಗಿನಿಂದ ಮುಚ್ಚುತ್ತಿದ್ದರು. ಹಾಗೂ 18 ಪವನ್ ಚಿನ್ನ ಹಾಗೂ 6 ಲಕ್ಷ ನಗದು ಹಣವನ್ನು ನನ್ನ ತವರು ಮನೆಯಿಂದ ತರಬೇಕೆಂದು ನನ್ನಲ್ಲಿ 1ನೇ ಆರೋಪಿಯು, 2 ಹಾಗೂ 3ನೇ ಆರೋಪಿಯ ಪ್ರಚೋದನೆಯ ಮೇರೆಗೆ ನನ್ನಲ್ಲಿ ಸದ್ರಿ ಚಿನ್ನ ಹಾಗೂ ನಗದಿನ ಬೇಡಿಕೆಯನ್ನು ಒಡ್ಡಿ , ನನಗೆ ಅವಾಚ್ಯ ಶಬ್ದಗಳಿಂದ ಬೈದು , ದೈಹಿಕ ಹಾಗೂ ಮಾನಸಿಕ ಹಿಂಸೆಯನ್ನು ನನಗೆ ನೀಡುತ್ತಿದ್ದರು.

ನನ್ನ ತವರು ಮನೆಯವರು ನನ್ನ ಗಂಡನ ಮನೆಗೆ ನನ್ನನ್ನು ನೋಡಲು ಬಂದಾಗ ನನ್ನ ಗಂಡನ ಮನೆಯವರು ನನ್ನ ತಂದೆ ತಾಯಿಯ ಬಳಿ ಮಾತನಾಡುತ್ತಿರಲಿಲ್ಲ. 1ನೇ ಆರೋಪಿಯ ಜೊತೆಗೆ ನಾನು ನನ್ನ ಅವಶ್ಯಕತೆಗಾಗಿ ಹಣವನ್ನು ಕೇಳಿದರೆ , 1ನೇ ಆರೋಪಿಯು ನನ್ನಲ್ಲಿ ನಿನಗೆಕೆ ಬೇಕು ಹಣ ಎಂದು ನನಗೆ ಹೇಳಿ ನನ್ನ ಖರ್ಚಿಗೆ ಹಣವನ್ನು ನೀಡುತ್ತಿರಲಿಲ್ಲ. 1ನೇ ಆರೋಪಿಯು ನನ್ನ ದಿನಬಳಕೆ ಸಾಮಾನುಗಳನ್ನು ಕೊಠಡಿಯ ಒಳಗಿದ್ದ ಕಬಾಟ್ ನ ಒಳಗೆ ಹಾಕಿ ಲಾಕ್ ಮಾಡಿ ಇಡುತ್ತಿದ್ದರು. ಹಾಗೂ 1ನೇ ಆರೋಪಿಯು ನಾನು ಯಾವ ಸಮಾರಂಭಗಳಿಗೆ  ಹಾಗೂ ನನ್ನ ಸಂಬಂಧಿಕರ ಮನೆಗೆ ಹೋಗಬಾರದೆಂದು ಹೇಳಿ,  ನನ್ನನ್ನು ಯಾವ ಸಮಾರಂಭಗಳಿಗೂ ಹೋಗಲು ಬಿಡುತ್ತಿರಲಿಲ್ಲ.

ತದನಂತರ ನಾನು ಗರ್ಭಿಣಿಯಾಗಿದ್ದು, ಆ ಸಂದರ್ಭದಲ್ಲಿ ನಾನು ಗರ್ಭಪಾತ ಮಾಡಲು 1ನೇ ಆರೋಪಿಯು ನನ್ನ ಹೊಟ್ಟೆಗೆ ತುಳಿಯುತ್ತಿದ್ದರು. ನಾನು ಗರ್ಭಿಣಿಯಾದ ಸಂದರ್ಭದಲ್ಲಿ, 1ನೇ

ಆರೋಪಿಯು ಮೊದಲು ನನ್ನನ್ನು ಕುಮಟಾದ ಖಾಸಗಿ ಆಸ್ಪತ್ರೆಗೆ ಕರೆದುಕೊಂಡು ಹೋಗುತ್ತಿದ್ದರು. ಆ ಸಂದರ್ಭದಲ್ಲಿ ನನಗೆ ಅವಳಿ ಮಕ್ಕಳೆಂದು ಖಾತ್ರಿಯಾಗಿತ್ತು. ಆ ವಿಚಾರ ತಿಳಿದ ಕೂಡಲೇ, ಅವಳಿ ಮಕ್ಕಳಾದರೆ ಖರ್ಚುಗಳು ಹೆಚ್ಚಾಗುತ್ತದೆ ಎಂದು 1ನೇ ಆರೋಪಿಯು ಶಿರಾಲಿಯ ಸರ್ಕಾರಿ ಆಸ್ಪತ್ರೆಗೆ ನನ್ನನ್ನು ದಾಖಲು ಮಾಡಿರುತ್ತಾರೆ.

ದಿಃ 20.02.2022 ರಂದು ನಾನು ಅವಳಿ ಮಕ್ಕಳಿಗೆ ಜನ್ಮವನ್ನು ನೀಡಿರುತ್ತೇನೆ. ಮೊದಲು ಹೆಣ್ಣುಮಗಳಾಗಿದ್ದು , ನಂತರ ಗಂಡುಮಗುವಿಗೆ ಜನ್ಮ ನೀಡಿರುತ್ತೇನೆ. ನಂತರ ಸರ್ಕಾರಿ ಆಸ್ಪತ್ರೆಯಿಂದ 1ನೇ ಆರೋಪಿಯು ನನ್ನನ್ನು ಅವರ ಮನೆಗೆ ಕರೆದುಕೊಂಡು ಬಂದಿದ್ದರು. ನಂತರ 12ನೇ ದಿನಕ್ಕೆ ನನ್ನ ಮಕ್ಕಳನ್ನು ತೊಟ್ಟಲಿಗೆ ಹಾಕುವ ಶಾಸ್ತ್ರವನ್ನು ಮಾಡಿರುತ್ತೇವೆ. ಆ ಸಂದರ್ಭದಲ್ಲಿ 2ನೇ ಆರೋಪಿಯು ಮಕ್ಕಳ ತೊಟ್ಟಿಲಿನಲ್ಲಿ 11 ಲಕ್ಷ ನಗದು ಹಣ ಹಾಗೂ ನನ್ನ ಇಬ್ಬರೂ ಮಕ್ಕಳಿಗೂ ಒಂದೊಂದು ಚಿನ್ನದ ಸರ, ಒಂದೊಂದು ಸೊಂಟದ ಪಟ್ಟಿ , ಹಾಗೂ ಒಂದೊಂದು ಬಳೆಯನ್ನು ನೀಡಿರುತ್ತಾರೆ. ನಂತರ ಸಂಬಂಧಿಕರು ನಮ್ಮ ಮನೆಯಲ್ಲಿ ನೆರದಿದ್ದ ಸಂದರ್ಭದಲ್ಲಿ, 11 ಲಕ್ಷ ನಗದು ಹಣ ಹಾಗೂ ಒಂದೊಂದು ಚಿನ್ನದ ಸರ, ಒಂದೊಂದು ಸೊಂಟದ ಪಟ್ಟಿ, ಹಾಗೂ ಒಂದೊಂದು ಬಳೆಯನ್ನು ತೆಗೆದು ಅವರ ಕಪಾಟಿನಲ್ಲಿ ಇಟ್ಟಿರುತ್ತಾರೆ . ನಂತರ ನನ್ನ ಅವಳಿ ಮಕ್ಕಳ ಜೊತೆ ನನ್ನ ತವರು ಮನೆಗೆ ಬಂದಿರುತ್ತೇನೆ. ಆ ಸಂದರ್ಭದಲ್ಲಿ ನನ್ನನ್ನು ಹಾಗೂ ನನ್ನ ಅವಳಿ ಮಕ್ಕಳನ್ನು ನೋಡಲು ನನ್ನ ಪತಿಯ ಮನೆಯವರು ಯಾರೂ ಬರುತ್ತಿರಲಿಲ್ಲ. ಹಾಗೂ ನನ್ನ ಹಾಗೂ ನನ್ನ ಅವಳಿ ಮಕ್ಕಳ ದೈನಂದಿನ ಖರ್ಚಿಗು ಯಾವುದೇ ಹಣವನ್ನು ನೀಡುತ್ತಿರಲಿಲ್ಲ. ನಂತರ ಸ್ವಲ್ಪ ದಿನಗಳ ಬಳಿಕ ನನ್ನ ಮೈದನನ ವಿವಾಹವು ನಿಶ್ಚಿತವಾಗಿರುತ್ತದೆ. ನಂತರ ಗುಟ್ಟಾಗಿ ನನ್ನ ಮೈದನನ್ನ ವಿವಾಹವನ್ನು ಮಾಡುವ ಬಗ್ಗೆ ವಿವಾಹದ ಹಿಂದಿನ ದಿನವೇ ನನ್ನನ್ನು ಗುರುಪುರಕ್ಕೆ ಕರೆದುಕೊಂಡು ಹೋಗಿರುತ್ತಾರೆ. ನಂತರ ನನ್ನ ಮೈದನನ ಪತ್ನಿಯ ಬಳಿ ನಾನು ಮಾತನಾಡಲು ನನ್ನ ಪತಿಯ ಮನೆಯವರು ನನ್ನನ್ನು ಬಿಡುತ್ತಿರಲಿಲ್ಲ. ನಂತರ ನನ್ನ ಮೈದನನ ಪತ್ನಿಯು ಅವರ ವಿವಾಹದ 8 ದಿನಗಳ ಬಳಿಕ ನನ್ನ ಮೈದನನ್ನು ತೊರೆದು

ಹೋಗಿರುತ್ತಾರೆ. ಹಾಗೆ ನನ್ನ ಮೈದನನ ಪತ್ನಿಯು ನನ್ನ ಮೈದನನ್ನು ತೊರೆದು ಹೋದ ಬಾಬ್ತು ಅದರ ಆರೋಪಿವನ್ನು ಸಹ ನನ್ನ ಪತಿಯ ಮನೆಯವರು ನನ್ನ ಮೇಲೆ ಹಾಕಿರುತ್ತಾರೆ. ನನ್ನ ಹಾಗೂ ನನ್ನ ಮೈದನನ ಹೆಂಡತಿಯ ನಡುವೆ ಯಾವುದೇ ಸಂಪರ್ಕ ಇದ್ದಿರಲಿಲ್ಲ.

ನನ್ನ ಹಾಗೂ ನನ್ನ ಪತಿ 1ನೇ ಆರೋಪಿಯ ನಡುವೆ ಇದ್ದಂತಹ ವೈಮನಸ್ಸಿನ ಕುರಿತು, ನನ್ನ ತವರು ಮನೆಯಲ್ಲಿ, ನಮ್ಮ ಹಿರಿಯರು ಪಂಚಾಯತಿಗೆ ಕರೆದಿದ್ದು , ನಂತರ ನಮ್ಮ ಸಮಸ್ಯೆಯನ್ನು ಬಗೆಹರಿಸಿ, ನನ್ನ ಪತಿಯ ಮನೆಯವರು ನನ್ನನ್ನು ಹಾಗೂ  ನನ್ನ ಅವಳಿ ಮಕ್ಕಳನ್ನು ಅವರ ಮನೆಗೆ ಕರೆದುಕೊಂಡು ಹೋಗಿರುತ್ತಾರೆ. ಹಾಗೆ ನಾನು ಅವರ ಮನೆಗೆ ಹೋದನಂತರ ಪುನಃ ನನ್ನ ಪತಿಯ ಮನೆಯವರು ನನಗೆ ಹಿಂಸಿಸಲು ಪ್ರಾರಂಭಿಸಿರುತ್ತಾರೆ. ನನ್ನ ಪತಿಯ ಮನೆಯವರು ಹಾಗೂ ನನ್ನ ಪತಿಯು ಹೊರಗಡೆ ಹೋದಾಗ ನಾನು ಎಲ್ಲಿ ಹೊರಗಡೆ ಹೋಗಬಾರದೆಂದು ನನಗೆ ಮನೆಯೊಳಗೆ ಇರಿಸಿ, ಕೊಠಡಿಗೆ ಲಾಕ್ ಹಾಕಿ ಹೋಗುತ್ತಿದ್ದರು. ಹಾಗೆ ನಾನು ಕೊಠಡಿಯ ಒಳಗೆ ಲಾಕ್ ಆಗಿದ ಕಾರಣಕ್ಕಾಗಿ ನನ್ನ ಹಾಗೂ ನನ್ನ ಅವಳಿ ಮಕ್ಕಳ ದೈನಂದಿನ ಚಟುವಟಿಕೆಗಳು ನಿಂತು ಹೋಗಿದ್ದವು. 1 ರಿಂದ 3ನೇ ಆರೋಪಿಗಳು ಒಟ್ಟಾಗಿ ಊಟೋಪಚಾರಗಳನ್ನು ಮಾಡುತ್ತಿದ್ದು , ನನ್ನನ್ನು ಪ್ರತ್ಯೇಕವಾಗಿ ಇರಿಸುತ್ತಿದ್ದರು.

ದಿಃ 25.04.2023 ರಂದು ನನ್ನ ಪತಿಯ ಮನೆಯವರು ನನ್ನನ್ನು ಅವರ ಮನೆಯಿಂದ ಹೊರಗೆ ಹಾಕಿರುತ್ತಾರೆ. ಹಾಗೆ ನನ್ನನ್ನು ಮನೆಯಿಂದ ಹೊರಗೆ ಹಾಕಿದ ನಂತರ , ನಾನು ನನ್ನ ತವರು ಮನೆಯಲ್ಲಿದ್ದು , ನನ್ನ ತಂದೆಯವರು ಸುಧಾರಿಸಲು ಪ್ರಯತ್ನಿಸಿದ್ದು , ಒಂದು ವರ್ಷಗಳ ಕಾಲ ನಾನು ಕಾಯುತ್ತಿದ್ದೆ. ನಂತರ ನನ್ನ ಪತಿಯ ಮನೆಯವರು ಸುಧಾರಿಸುವುದಿಲ್ಲ ಎಂದು ದಿಃ 27.02.2024 ರಂದು ನಾನು ಹಾಗೂ ನನ್ನ ತಂದೆಯವರು ಸೇರಿ ಫಿರ್ಯಾದಿಯನ್ನು ಬರೆದು ಪೊಲೀಸ್ ಠಾಣೆಗೆ ನೀಡಿರುತ್ತೇವೆ. ಸದ್ರಿ ಫಿರ್ಯಾದಿಯನ್ನು ಈಗ ನಾನು ನ್ಯಾಯಾಲಯದಲ್ಲಿ ನೋಡುತ್ತಿದ್ದು, ಅದನ್ನು ನಾನು ನೋಡಿ, ಗುರುತಿಸಿ, ಒಪ್ಪಿ  ನಿಪಿ-1 ಎಂದು, ಅದರಲ್ಲಿರುವ ನನ್ನ ಸಹಿಯನ್ನು ನಾನು ನೋಡಿ, ಗುರುತಿಸಿ, ಒಪ್ಪಿ ನಿಪಿ-1(ಎ) ಎಂದು, ಹಾಗೆ

ಫಿರ್ಯಾದಿಯನ್ನು ನೀಡಿದ ಮರುದಿನ ಪೊಲೀಸರು ಶಿರಾಲಿ ಮನೆಯಲ್ಲಿ ಮಹಜರು ಕ್ರಮಕ್ಕಾಗಿ ನನ್ನನ್ನು ಕರೆದಿರುತ್ತಾರೆ. ಆ ಸಂದರ್ಭದಲ್ಲಿ ನಾನು, ಚಾಸಾ 2, ಚಾಸಾ 3 ರವರು ಹಾಜರಿದ್ದೆವು. ಆ ಸಂದರ್ಭದಲ್ಲಿ ಪೊಲೀಸರು ಶಿರಾಲಿ ಮನೆಯ ಛಾಯಾಚಿತ್ರ ಹಾಗೂ ಘಟನಾ ಸ್ಥಳದ ಛಾಯಾಚಿತ್ರವನ್ನು ತೆಗೆದಿರುತ್ತಾರೆ. ಹಾಗೂ ಮನೆಯ ಮ್ಯಾಪಿಂಗ್ ನ್ನು ಮಾಡಿರುತ್ತಾರೆ. ಪೊಲಿಸರು ಮಹಜರು ಕ್ರಮವನ್ನು ಬೆಳಿಗ್ಗೆ 11.30 ಗಂಟೆಯಿಂದ 12.30 ಗಂಟೆಯವರೆಗೆ ಜರುಗಿಸಿರುತ್ತಾರೆ . ನಾನು ಈಗ ನ್ಯಾಯಾಲಯದಲ್ಲಿ ಘಟನಾ ಸ್ಥಳದ ಪಂಚನಾಮೆಯನ್ನು ನೋಡುತ್ತಿದ್ದು, ಅದನ್ನು ನಾನು ನೋಡಿ, ಗುರುತಿಸಿ, ಒಪ್ಪಿ ನಿಪಿ–2 ಎಂದು, ಅದರಲ್ಲಿರುವ ನನ್ನ ಸಹಿಯನ್ನು ನಾನು ನೋಡಿ, ಗುರುತಿಸಿ, ಒಪ್ಪಿ ನಿಪಿ–2(ಎ) ಎಂದು, ಕರಡು ನಕಾಶೆಯನ್ನು ನಾನು ಈಗ ನ್ಯಾಯಾಲಯದಲ್ಲಿ ನೋಡುತ್ತಿದ್ದು, ಅದನ್ನು ನಾನು ನೋಡಿ ನಿಪಿ–3 ಎಂದು, ಅದರಲ್ಲಿರುವ ನನ್ನ ಸಹಿಯನ್ನು ನಾನು ನೋಡಿ, ಗುರುತಿಸಿ, ಒಪ್ಪಿ ನಿಪಿ–3(ಎ) ಎಂದು, ಮಹಜರಿನ ಸಂದರ್ಭದಲ್ಲಿ ತೆಗೆದ ಎರಡು ಛಾಯಾಚಿತ್ರಗಳನ್ನು ನಾನು ಈಗ ನ್ಯಾಯಾಲಯದಲ್ಲಿ ನೋಡುತ್ತಿದ್ದು, ಅದನ್ನು ನಾನು ನೋಡಿ, ಗುರುತಿಸಿ, ಒಪ್ಪಿ ಕ್ರಮವಾಗಿ ನಿಪಿ–4 ಹಾಗೂ ನಿಪಿ–5 ಎಂದು ನಿಶಾನಿ ಕರಿಸಲಾಯಿತು. ನಂತರ ನನ್ನ ಗಂಡನ ಮನಯವರಿಗೆ ಪೊಲೀಸರು ನೋಟಿಸನ್ನು ನೀಡಿರುತ್ತಾರೆ.

ದಿಃ 02.03.2024 ರಂದು ನಾನು ನನ್ನ ತಂದೆಯವರ ಜೊತೆಗೆ ಭಟ್ಕಳ ಗ್ರಾಮೀಣ ಪೊಲೀಸ ಠಾಣೆಗೆ ಹೋಗಿದ್ದು ,ನನ್ನ ಹಾಗೂ 1ನೇ ಆರೋಪಿಯ ವಿವಾಹದ ಆಮಂತ್ರಣ ಪತ್ರಿಕೆ ಹಾಗೂ ವಿವಾಹದ ಛಾಯಾಚಿತ್ರ ಹಾಗೂ ಒಡವೆ ಮಾಡಿಸಿದ ರಶೀದಿ ಹಾಗೂ ಮದುವೆ ಹಾಲ್ ನ ರಶೀದಿಯನ್ನು ಪೊಲೀಸರಿಗೆ ನಾನು ನೀಡಿರುತ್ತೇನೆ. ಆ ಸಂದರ್ಭದಲ್ಲಿ ಚಾಸಾ 2 ಹಾಗೂ 4 ರವರು ಸಾಕ್ಷಿದಾರರಾಗಿದ್ದರು. ಸ್ಧಿ್ರ ಮಹಜರ್ ನ್ನು ಮಧ್ಯಾಹ್ಣ 1.00 ಗಂಟೆಯಿಂದ 2.00 ಗಂಟೆಯವರೆಗೆ ಜರುಗಿಸಿರುತ್ತಾರೆ. ಸ್ಧಿ್ರ ಸ್ವತ್ತು ಜಪ್ತ ಪಂಚನಾಮೆಯನ್ನು ನಾನು ಈಗ ನ್ಯಾಯಾಲಯದಲ್ಲಿ ನೋಡುತ್ತಿದ್ದು, ಅದನ್ನು ನಾನು ನೋಡಿ, ಗುರುತಿಸಿ,

ಒಪ್ಪಿ ನಿಪಿ-6 ಎಂದು, ಅದರಲ್ಲಿರುವ ನನ್ನ ಸಹಿಯನ್ನು ನಾನು ನೋಡಿ, ಗುರುತಿಸಿ, ಒಪ್ಪಿ ನಿಪಿ-6(ಎ) ಎಂದು ನಿಶಾನಿ ಕರಿಸಲಾಯಿತು.

ಸ್ವತ್ತು ಜಪ್ತು ಪಂಚನಾಮೆಯ ಸಂದರ್ಭದಲ್ಲಿ ತೆಗೆದ 3 ಛಾಯಾಚಿತ್ರಗಳನ್ನು ನಾನು ಈಗ ನ್ಯಾಯಾಲಯದಲ್ಲಿ ನೋಡುತ್ತಿದ್ದು, ಅದನ್ನು ನಾನು ನೋಡಿ, ಗುರುತಿಸಿ, ಒಪ್ಪಿ ಮು.ಮ 1 ಎಂದು, ನನ್ನ ಹಾಗೂ 1ನೇ ಆರೋಪಿಯ ವಿವಾಹದ ಆಮಂತ್ರಣ ಪತ್ರಿಕೆಯನ್ನು ಮು.ಮ-2 ಎಂದು, ದಿಃ 07.01.2021 ರಂದು ಶ್ರೀ ಲಕ್ಷ್ಮೀ ವೆಂಕಟೇಶ ದೇವಸ್ಥಾನವು ನೀಡಿದ ರಶೀದಿಯನ್ನು ಮು.ಮ-3 ಎಂದು, ಚಿನ್ನ ಖರೀದಿ ಮಾಡಿದ ಬಾಬ್ತು ಶ್ರೀ ವಿನಾಯಕ ಜ್ಯುವೇಲರ್ ವರ್ಕ್ಸ ಕುಮಟಾರವರು ದಿಃ 20.12.2020 ಹಾಗೂ ದಿಃ 19.12.2020 ರಂದು ನೀಡಿದ 2 ಬಿಲ್ ನ್ನು ಒಟ್ಟಾಗಿ ಮು.ಮ-4 ಎಂದು , 03.01.2024 ರಂದು ಜಿ ಎಸ್ ಬಿ ಸಮಾಜ ಶಿರಾಲಿ ರವರು ನನ್ನ ಹಾಗೂ 1ನೇ ಆರೋಪಿಯ ವಿವಾಹದ ಸಂಧಾನದ ವಿಫಲತೆಯ ಕುರಿತಂತೆ ನೀಡಿದ ದಾಖಲೆಯನ್ನು ಮು.ಮ-5 ಎಂದು,ಈಗ ನ್ಯಾಯಾಲಯದಲ್ಲಿರುವ ಆರೋಪಿಗಳನ್ನು ನಾನು ನೋಡಿ ಗುರುತಿಸಿರುತ್ತೇನೆ.

**<u>ಪಾಟೀ ಸವಾಲುಃ ಆರೋಪಿಯ ಪರ ಶ್ರೀ ಕೆ.ಎಚ್.ಎನ್. ವಕೀಲರಿಂದಃ</u>**

ನಾನು ಬಿ.ಕಾಂ. ಪದವೀಧರೆ. ನಾನು ಆ ಕಾಲದಲ್ಲಿ ಗೆಳತಿಯರನ್ನು ಹೊಂದಿದ್ದು, ಅವರೊಡನೆ ಈಗಲೂ ಸಂಪರ್ಕವನ್ನು ಹೊಂದಿರುತ್ತೇನೆ. ನಾನು ನನ್ನ ಗೆಳತಿಯರೊಡನೆ ನನ್ನ ಜೀವನದ ಕಷ್ಟ ಸುಖಗಳನ್ನು ನಾನು ಹಂಚಿಕೊಳ್ಳುತ್ತಿದ್ದೀನಿ. ನಾನು ನನ್ನ ಗೆಳತಿಯರೊಡನೆ ನನ್ನ ಜೀವನದ ಕಷ್ಟ ಸುಖಗಳನ್ನು ಹಂಚಿಕೊಳ್ಳುತ್ತಿದ್ದ ಬಗ್ಗೆ ಪೊಲೀಸರು ಕೇಳಿದ್ದರಾ ಎಂಬ ಪ್ರಶ್ನೆಗೆ ಸಾಕ್ಷಿಯು ಪೊಲೀಸರು ಕೇಳಿರುವುದಿಲ್ಲ , ನಾನು ಹೇಳಿರುವುದಿಲ್ಲ ಎಂದು ಉತ್ತರಿಸಿರುತ್ತಾರೆ. ನನ್ನ ತಾಯಿಗೆ ಆರು ಸಹೋದರಿಯರು. ನನ್ನ ತಾಯಿಗೆ ಒಬ್ಬರು ಸಹೋದರ ಇರುತ್ತಾರೆ. ನಾವು ನನ್ನ ತಾಯಿಯ ಸಹೋದರ ಸಹೋದರಿಯರೊಂದಿಗೆ ನಾನು ಒಡನಾಟವನ್ನು ಹೊಂದಿರುತ್ತೇನೆ. ಹಾಗೂ ನನ್ನ ತವರು ಮನೆಯ ಸಮಾರಂಭಗಳಲ್ಲಿ ನನ್ನ ತಾಯಿ ಸಹೋದರ ಸಹೋದರಿಯವರು ಒಟ್ಟಾರೆ ಸಂದರ್ಭದಲ್ಲಿ ನಾನು

ಅವರೊಂದಿಗೆ ನನ್ನ ಜೀವನದ ಬಗೆಗಿನ ಮಾತುಕತೆಯನ್ನು ಹೊಂದಿರುತ್ತೇನೆ. ನನ್ನ ತಾಯಿಯ ಸಹೋದರ ಸಹೋದರಿಯರೊಡನೆ ನಾನು ಮಾತುಕತೆಯನ್ನು ಹೊಂದಿರುತ್ತೇನೆ ಎಂದು ಪೊಲೀಸರು ಕೇಳಿರುವುದಿಲ್ಲ, ನಾನು ಹೇಳಿರುವುದಿಲ್ಲ ಎಂದು ಉತ್ತರಿಸಿರುತ್ತಾರೆ. ನನ್ನ ತಾಯಿಗೆ ಎಷ್ಟು ಮಂದಿ ಸಹೋದರ ಸಹೋದರಿಯರು ಇರುತ್ತಾರೆಂದು ಪೊಲೀಸರು ನನ್ನಲ್ಲಿ ವಿಚಾರಿಸಿರುವುದಿಲ್ಲ.

ದಿಃ 25.04.2023 ರಿಂದ ನಾನು ನನ್ನ ಪತಿಯ ಮನೆಯವರಿಂದ ಪ್ರತ್ಯೇಕವಾಗಿ ವಾಸಿಸಿರುತ್ತೇನೆ. ಹೊನ್ನಾವರ ನಗರದಿಂದ ನನ್ನ ಮನೆಯು 20 ಕಿ.ಮಿ. ದೂರ ಇರುತ್ತದೆ. ಹೊನ್ನಾವರದಿಂದ ಭಟ್ಕಳ ಸುಮಾರು 40 ಕಿ.ಮಿ. ದೂರವಿರುತ್ತದೆ. ನನ್ನ ತವರು ಮನೆ ಹೊನ್ನಾವರದ ಹೆಗ್ಗಾರದಲ್ಲಿ ಇದ್ದು, ಹೆಗ್ಗಾರದಲ್ಲಿ ಪೊಲಿಸ್ ಠಾಣೆ ಇರುವುದಿಲ್ಲ. ಆದರೆ ಹೊನ್ನಾವರ ನಗರದಲ್ಲಿ ಪೊಲಿಸ್ ಠಾಣೆ ಇರುತ್ತದೆ ಎಂದು ನುಡಿಯುತ್ತಾರೆ. ನಾನು ಹೊನ್ನಾವರ ಪೊಲಿಸ್ ಠಾಣೆಗೆ ಹೋಗಿ ಆರೋಪಿಗಳ ವಿರುದ್ಧ ಕಿರುಕುಳದ ಬಾಬ್ತು ನಾನು ದೂರನ್ನು ನೀಡಿರುವುದಿಲ್ಲ.

ಫಿರ್ಯಾದಿಯನ್ನು ನಾನು ಸ್ವತಃ ಬರೆದು ನಂತರ ಬೆರಳಚ್ಚು ಪಡಿಸಿನ ಭಟ್ಕಳದ ಟೈಪಿಂಗ್ ಸೆಂಟರ್ ನಲ್ಲಿ ಬೆರಳಚ್ಚುಪಡಿಸಿರುತ್ತೇನೆ. ಫಿರ್ಯಾದಿಯನ್ನು ನೀಡಲು ನನ್ನ ತಂದೆಯವರೊಂದಿಗೆ ನಾನು ಹೋಗಿದ್ದೆನು. ನಾನು ನನ್ನ ಫಿರ್ಯಾದಿಯ ಪ್ಯಾರಾ ನಂ. 9, ಪುಟ ಸಂಖ್ಯೆ 8 ರಲ್ಲಿ, ನನ್ನ ಗಂಡ ಮಾಡಿರುವ ಸಂದೇಶಗಳ ಪ್ರಿಂಟ್ ಔಟ್‌ಗಳನ್ನು ಈ ದೂರಿನೊಂದಿಗೆ  ಹಾಜರು ಮಡಿರುತ್ತೇನೆ ಎನ್ನುವ ಸಂಗತಿಯು ಸುಳ್ಳಾಗಿರುತ್ತದೆ ಎಂದರೆ ಸಾಕ್ಷಿಯು 1ನೇ ಆರೋಪಿಯು ಇತರ ಮಹಿಳೆಯರೊಂದಿಗೆ ಅಕ್ರಮ ಸಂಬಂಧ ಹೊಂದಿದ್ದು ಅದರ ಬಾಬ್ತು ನಾನು ಪೊಲೀಸ್ ಠಾಣೆಗೆ ನೀಡಲು ಹೋದಾಗ ನನ್ನ ಮೊಬೈಲ್ ಫೋನ್ ಕೆಟ್ಟು ಹೋಗಿರುತ್ತದೆ ಎಂದು ನುಡಿಯುತ್ತಾರೆ. ಸದ್ರಿ ದಾಖಲೆಗಳನ್ನು ಪೊಲೀಸರು ನನ್ನ ಬಳಿ ಕೇಳಿರುವುದಿಲ್ಲ. ಅದರ ಬಾಬ್ತು ನನ್ನ ಮರುಹೇಳಿಕೆಯನ್ನು ಪೊಲೀಸರು ಪಡೆದುಕೊಂಡಿರುವುದಿಲ್ಲ.

**ಮುಂದುವರಿದ ಪಾಟೀಸವಾಲಿಗೆ ಆರೋಪಿಯ ಪರ ಶ್ರೀ ಕೆ.ಎಚ್.ಎನ್. ವಕೀಲರು ಕಾಲಾವಕಾಶ ಕೋರಿದ್ದರಿಂದ, ಕಾಲಾವಕಾಶ ನೀಡಲಾಯಿತು.**

**ನನ್ನ ಉಖ್ತಲೇಖನ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

**ಓ.ಹೇ.ಕೇ. ಸರಿ ಇದೆ ಎಂದು ಒಪ್ಪಿರುತ್ತಾರೆ**

**Sd/-**

**ಸಾಕ್ಷಿಯ ಸಹಿ** **ಹೆಚ್ಚುವರಿ ನ್ಯಾ.ದಂ., ಭಟ್ಕಳ.**